ದಿನಾಂಕಃ 01.08.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)
ಪ್ರಾ.ಸಾಃ

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ. ಯು.ಎಸ್., ವಕೀಲರಿಂದಃ

2. ದಾವಾ ಸ್ವತ್ತನ್ನು ನಾನು ಖರೀದಿ ಮಾಡುವ ಸಮಯದಲ್ಲಿ ಖಾತಾ ಡಿಮ್ಯಾಂಡ್ ಹಾಗೂ ಪಹಣಿ ಹಾಗೂ ಮೂಲ ದಾಖಲಾತಿಗಳನ್ನು ನೋಡಿ ಖರೀದಿ ಮಾಡಿರುತ್ತೇನೆ. ದಾವಾ ಸ್ವತ್ತು ನಾನು ಖರೀದಿ ಮಾಡುವ ಕಾಲಕ್ಕೆ ತಮ್ಮಯ್ಯ ಎಂಬುವವರ ಹೆಸರಿನಲ್ಲಿ ಖಾತೆ ಇತ್ತು. ಸದರಿ ದಾಖಲಾತಿಗಳನ್ನು ನಾನು ನಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಕರಾರು ಇಲ್ಲ ಎಂದು ತಿಳಿದುಕೊಂಡ ನಂತರವೇ ಖರೀದಿ ಮಾಡಿರುತ್ತೇನೆ.

3. ತಿಪ್ಪೇಗೌಡ ಮತ್ತು ಕರೀಗೌಡ ಎಂಬುವವರು ನಿಮಗೆ ಗೊತ್ತೇ ಎಂದರೆ ಹೆಸರು ಗೊತ್ತು. ಸದರಿ ತಿಪ್ಪೇಗೌಡ ಮತ್ತು ಕರೀಗೌಡ ಅಣ್ಣತಮ್ಮಂದಿರು ಎಂದರೆ ಸರಿ. ದಾವಾ ಸ್ವತ್ತು ತಿಪ್ಪೇಗೌಡರಿಗೆ ವಿಭಾಗದ ಮೂಲಕ ಬಂದ ಸ್ವತ್ತು ಎಂದರೆ ಸಾಕ್ಷಿ ಇರಬಹುದು ಆದರೆ ನಾನು ತಮ್ಮಯ್ಯನಿಂದ ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಖಾನೇಷು ಮಾರಿ ನಂ.39 ಕರೀಗೌಡರ ಭಾಗಕ್ಕೆ ಬಂದ ಸ್ವತ್ತು ಎಂದರೆ ಇರಬಹುದೇನೋ ನನಗೆ ಗೊತ್ತಿಲ್ಲ. ಖಾತಾ ನಂ. 38 ಮತ್ತು 39 ರ ಸ್ವತ್ತು ಸದರಿ ತಿಪ್ಪೇಗೌಡ ಮತ್ತು ಕರೀಗೌಡರಿಗೆ ಸೇರಿದ ಸ್ವತ್ತು ಎಂದರೆ ಏನೋ ನನಗೆ ಗೊತ್ತಿಲ್ಲ. 18 **X** 46 , ಮತ್ತು 18 **X** 37 ರ ಒಟ್ಟು 18 **X** 83 ಸ್ವತ್ತುಗಳು ಸದರಿಯವರಿಗೆ ಸೇರಿದ ಸ್ವತ್ತುಗಳು ಎಂದರೆ ಸಾಕ್ಷಿ ಅವರಿಗೆ ಹಕ್ಕಿಲ್ಲ, ನಾನು ಖೀರಿದಿ ಮಾಡಿರುವುದು 18 **X** 40 ಎಂದು ನುಡಿಯುತ್ತಾರೆ.

4. ನಿಪಿ 1 ರಲ್ಲಿ ತಪ್ಪೇಗೌಡರು ಪಕ್ಷಗಾರರಲ್ಲ ಎಂದರೆ ನಾನು ಖರೀದಿ ಮಾಡಿರುವುದು ತಮ್ಮೇಗೌಡರಿಂದ ಎಂದು ನುಡಿಯುತ್ತಾರೆ.

5. ದಿಃ 20.09.1990 ರಲ್ಲಿ ಪ್ರತಿವಾದಿ ಗಂಡನಿಗೆ ಕ್ರಯದ ಕರಾರು ಮಾಡಿಕೊಟ್ಟಿದ್ದರು, ಅದೇ ರೀತಿ ದಿಃ 03.07.1991 ರಲ್ಲಿ ಸದರಿ ತಿಪ್ಪೇಗೌಡ ಮತ್ತು ಕರೀಗೌಡರು 18 **X** 83 ರ ಸ್ವತ್ತನ್ನು ಪ್ರತಿವಾದಿಯ ಗಂಡನಿಗೆ ಕ್ರಯ ಪತ್ರ ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ವಿಚಾರ ನನಗೆ ಗೊತ್ತಿದ್ದರೂಾ ಸಹ ನನಗೆ ಗೊತ್ತಿದ್ದರೂಾ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1991 ರಿಂದ ಇಲ್ಲಿಯವರೆವಿಗೂ ಪ್ರತಿವಾದಿ ಮತ್ತು ಅವರ ಕುಟುಂಬದವರು ದಾವಾ ಸ್ವತ್ತಿನಲ್ಲಿ ಗುಡಿಸಲು ನಿರ್ಮಾಣ ಮಾಡಿಕೊಂಡು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.
6. ಇದೇ ನ್ಯಾಯಾಲಯದಲ್ಲಿ ಪ್ರತಿವಾದಿ ವಿರುದ್ಧ ಮೂರು ದಾವೆಗಳು ಬಾಕಿ ಇದೆ ಎಂದರೆ ಎರಡು ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ.
7. 1990 ರಿಂದ 2014 ರವರೆಗೆ ಪ್ರತಿವಾದಿಯೇ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ವಗೈರೆ ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.
8. 25.06.2012 ರಲ್ಲಿಯೇ ಪ್ರತಿವಾದಿಯ ಗಂಡ ನನ್ನ ವಿರುದ್ಧ ನಾನು ಅಕ್ರಮವಾಗಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದು ಪಂಚಾಯಿತಿಗೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ.
9. ಪ್ರತಿವಾದಿಯ ಗಂಡನ ಹೆಸರಿನಲ್ಲಿ ಖಾತೆಯಿೂಗಿದ್ದರೂಾ ಸಹ ತಮ್ಮಯ್ಯನೊಂದಿಗೆ ಶಾಮೀಲಾಗಿ ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಕ್ರಯ ಪತ್ರ ಸೃಷ್ಟಿ ಮಾಡಿದಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳು ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಬಾಧ್ಯತೆ ಮತ್ತು

ಸ್ವಾಧೀನಾನುಭವದಲ್ಲಿ ಇಲ್ಲದೇ ಇದ್ದರೂ ಸಹ ಸುಳ್ಳು ದಾಖಲಾತಿ ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ರಾಜಕೀಯ ಮತ್ತು ಆರ್ಥಿಕವಾಗಿ ಸಬಲನಾಗಿದ್ದು, ಪ್ರತಿವಾದಿಯರನ್ನು ದಾವಾ ಸ್ವತ್ತಿನಿಂದ ಹೊರ ಹಾಕುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ,
ಚನ್ನಪಟ್ಟಣ.